# ಕರ್ನಾಟಕ ವಿಧಾನ ಪರಿಷತ್ತು

1) ಚುಕ್ಕೆ ಗುರುತಿಲ್ಲದ ಪ್ರಶ್ನೆ : 360(437)

2) ಸದಸ್ಯರ ಹೆಸರು : ಶ್ರೀ ಬಿ.ಕೆ. ಹರಿಪ್ರಸಾದ್ (ಮಾನ್ಯ ವಿಧಾನಸಭೆಯಿಂದ ಚುನಾಯಿತರಾದವರು)

3) ಉತ್ತರಿಸುವ ದಿನಾಂಕ : 04/02/2021

4) ಉತ್ತರಿಸುವ ಸಚಿವರ ಹೆಸರು : ಮಾನ್ಯ ಮುಖ್ಯ ಮಂತ್ರಿಗಳು

| ಕ್ರಮ ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| ಅ) | ಕೆ.ಜಿ.ಐ.ಡಿ.ಯಲ್ಲಿರುವ ನೌಕರರ ಅತೀ ಮುಖ್ಯ ದಾಖಲೆಗಳನ್ನು ಡಿಜಿಟಲೀಕರಣಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; | ಸರ್ಕಾರದ ಆದೇಶ ಸಂಖ್ಯೆ:ಆಇ 74 ಕವಿಇ 2017, ದಿನಾಂಕ:22/10/2019ರಂತೆ ಕರ್ನಾಟಕ ಸರ್ಕಾರಿ ವಿಮಾ ಇಲಾಖೆಯ ಸಂಪೂರ್ಣ ಗಣಕೀಕರಣಕ್ಕೆ ಸಂಬಂಧಿಸಿದಂತೆ, ಸಮಗ್ರ ಯೋಜನೆಗೆ ವಿಮಾ ಪಾಲಿಸಿ, ಸಾಲ ಮತ್ತು ದಾಖಲಾತಿಗಳ ಡಿಜಿಟಲೈಸೇಷನ್ ಕಾಮಗಾರಿಯನ್ನು ಸೆಂಟರ್ ಫಾರ್ ಸ್ಮಾರ್ಟ್ ಗೌವರ್ನೆನ್ಸ್ (ಸಿ.ಎಸ್.ಜಿ)ರವರಿಗೆ ನೀಡಲಾಗಿರುತ್ತದೆ. ಪ್ರಥಮ ಹಂತವಾಗಿ ಜನ್ಮ ದಿನಾಂಕ: 01/01/1965ಕ್ಕಿಂತ ಮೇಲ್ಪಟ್ಟ ಅಂದಾಜು 4.7 ಲಕ್ಷ ವಿಮಾದಾರರ 13.00 ಲಕ್ಷ ವಿಮಾ ಪಾಲಿಸಿಗಳ ಡಾಟಾ ಎಂಟ್ರಿ ಕಾರ್ಯವು ಮುಕ್ತಾಯಗೊಂಡಿರುತ್ತದೆ. ಎರಡನೇ ಹಂತದಲ್ಲಿ 1990-91ರಿಂದ ಇಲ್ಲಿಯವರೆಗಿನ ವಿಮಾದಾರರ ಪ್ರೀಮಿಯಂ ಮತ್ತು ಸಾಲದ ಕಂತುಗಳ ಡಾಟಾ ಎಂಟ್ರಿ ಕಾರ್ಯ ಪ್ರಗತಿಯಲ್ಲಿದೆ. |
| ಆ) | ಸರ್ಕಾರಿ ನೌಕರರ ನಿಯತಕಾಲಿಕ ಅವಧಿ ಮುಕ್ತಾಯದ ಕ್ಲೇಮುಗಳನ್ನು ಇತ್ಯರ್ಥಪಡಿಸುವಲ್ಲಿ ಮತ್ತು ಸಾಲ ನೀಡಿಕೆಯಲ್ಲಿ ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಇಲ್ಲ |

| | | |
|---|---|---|
| ಇ) | ಸರ್ಕಾರಿ ನೌಕರರ ಅವಧಿ ಮುಕ್ತಾಯದ ಕ್ಲೇಮುಗಳ ಇತ್ಯರ್ಥಪಡಿಸುವಿಕೆ ಮತ್ತು ಸಾಲ ನೀಡಿಕೆಯನ್ನು ತ್ವರಿತಗೊಳಿಸಲು ಸರ್ಕಾರ ತೆಗೆದುಕೊಂಡ ಕ್ರಮವೇನು? | ಸರ್ಕಾರಿ ನೌಕರರ ನಿಯತಕಾಲಿಕ ಅವಧಿ ಮುಕ್ತಾಯದ ಕ್ಲೇಮುಗಳು ಅನಗತ್ಯ ವಿಳಂಬವಿಲ್ಲದೇ ಡಿಸೆಂಬರ್, 2020ರ ಮಾಹೆಯಲ್ಲಿ ಶೇ.77 ಹಾಗೂ ಸಾಲ ನೀಡಿಕೆ ಪ್ರಕರಣಗಳು ಶೇ.92ರಷ್ಟು ವಿಲೇವಾರಿಯಾಗಿರುತ್ತವೆ. |

ಸಂಖ್ಯೆ: ಆಇ 11 ಕವಿಇ 2021

(ಬಿ.ಎಸ್. ಯಡಿಯೂರಪ್ಪ)
ಮುಖ್ಯ ಮಂತ್ರಿ.